## ನಾಲ್ಕು ದಶಕಗಳ ಬೆಸುಗೆ

'ಸುಧಾ' ಪತ್ರಿಕೆಯ ನಾಲ್ಕು ದಶಕಗಳ ಬೆಸುಗೆ ಬಿಡಿಸಲಾರದ್ದು. 80ರ ದಶಕದಲ್ಲಿ ಪ್ರಕಟವಾಗುತ್ತಿದ್ದ ಜನಪ್ರಿಯ ಧಾರಾವಾಹಿಗಳು ಮತ್ತು ಅನೇಕ ವಸ್ತುವೈವಿಧ್ಯಗಳಿಂದ 'ಸುಧಾ' ಓದಲು ಆಕರ್ಷಕವಾಗಿತ್ತು. 'ಸುಧಾ'ದಲ್ಲಿ 2014ರಿಂದ ನನ್ನ ಅನೇಕ ಕಥೆಗಳು ಪ್ರಕಟಗೊಂಡವು. ಜೊತೆಗೆ ಒಂದೆರಡು ಅನುವಾದ ಕಥೆಗಳು ಸೇರಿದ್ದವು. ಶಿಶು ಕವನಗಳು, ಚಿತ್ರ ಲೇಖನಗಳು, ಜಾಣರ ಪೆಟ್ಟಿಗೆಯಲ್ಲಿ ಅಭಿಪ್ರಾಯಗಳು ಪ್ರಕಟಗೊಂಡವು. ಹೀಗೆ 'ಸುಧಾ' ನನ್ನನ್ನು ಲೇಖಕನನ್ನಾಗಿ ಬೆಳೆಸಿತು. ಈಗಲೂ ವೈವಿಧ್ಯಮಯ ವಿಷಯಗಳನ್ನು ಹೊತ್ತು ತರುತ್ತಿರುವ 'ಸುಧಾ', ಕನ್ನಡ ನಾಡಿನ ಜನಪ್ರಿಯ ಪತ್ರಿಕೆ.

—ಡಿ. ರಾಮನಮಲಿ, ಹರಪನಹಳ್ಳಿ

# 'ಸುಧಾ' ಜೊತೆಗಿನ ಓದುಗರ ಒಡನಾಟ

## 'ಸು'ಮಧುರ 'ಧಾ'ರೆ

'ಸುಧಾ', ನಿನ್ನ ಬಗ್ಗೆ ಎಷ್ಟು ಬರೆದರೂ ಸಾಲದು. ಬಹಳಷ್ಟು ವಾರಗಳಿಂದ ಅದೆಷ್ಟೋ ಜನ ನಿನ್ನ ಬಗ್ಗೆ ಪ್ರೀತಿಯಿಂದ ಬರೆದಿರುವುದನ್ನು ಓದಿದ್ದೇನೆ. ಒಂದಂತೂ ನಿಜ! ಪರೀಕ್ಷೆಗೆ ಹೋಗುವ ಒಂದು ಗಂಟೆ ಮುಂಚೆ ಕೂಡ, ನಿನ್ನ ಪುಟ ತಿರುಗಿಸಿ ಹೋಗುತ್ತಿದ್ದವಳು, ಇತ್ತೀಚೆಗೆ ಗುರುವಾರ ಬೆಳಿಗ್ಗೆ ಬಂದವಳನ್ನು ನಾನು ಮಾತಾಡಿಸುವುದು ರಾತ್ರಿಯೇ. ಏನು ಮಾಡುವುದು ಹೇಳು, ನಿನ್ನಂತೆ ನನಗೂ ವಯಸ್ಸಾಯಿತು. ಅದೇನೇ ಇರಲಿ, ನನ್ನ ತಲೆಗೆ ತೋಚಿದ್ದೆಲ್ಲಾ ಗೀಚಿ ಕಳಿಸಿದ್ದನ್ನು ಪ್ರಕಟಿಸಿದ್ದೀಯ. ಹಾಗಾಗಿ ನಿನ್ನ ಬಗ್ಗೆ ನನಗೆಷ್ಟು ಹೆಮ್ಮೆ ಗೊತ್ತಾ?




ಮುಂದೆ ಕೂಡ ಖುಷಿಯಾಗಿರು, ನಮ್ಮಂಥವರನ್ನು ಖುಷಿಯಾಗಿಡು.

—ಎಚ್.ಬಿ. ಪ್ರಮೀಳಾ, ಹಾರೋಗೊಳಿಗೆ

## ಓದಿನ ಹುಚ್ಚು ಹಿಡಿಸಿದವಳು...

ನಾನು 4ನೇ ತರಗತಿಯಲ್ಲಿದ್ದ ನೆನಪು. ನಮ್ಮ ಮನೆ ಪಕ್ಕ ನನ್ನ ದೊಡ್ಡಪ್ಪ, ಚಿಕ್ಕಪ್ಪನ ಮನೆಗಳಿದ್ದವು. ಅವರ ಮಕ್ಕಳೆಲ್ಲರೂ ನಮ್ಮ ಪ್ರಾಯದವರು. ನಾವೆಲ್ಲರೂ ಜೊತೆಯಾಗಿಯೇ ಶಾಲೆಗೆ ಹೋಗುತ್ತಿದ್ದೆವು. ರಜೆ ಬಂತೆಂದರೆ ದಿನದ 24 ಗಂಟೆಯೂ ಸಾಕಾಗುತ್ತಿರಲಿಲ್ಲ. ಮನೆ ಆಟ, ಕಳ್ಳ ಪೊಲೀಸ್, ನಡುಗುವ ಆಟ, ಗೇರುಬೀಜದ ಆಟ, ಹೀಗೆ ದಿನವೂ ಆಟದ ಗಲಾಟೆ. ಆಗಿನ್ನೂ ಟೀವಿ ಎಲ್ಲರ ಮನೆ ಪ್ರವೇಶಿಸಿರಲಿಲ್ಲ.

ರಜ, ಹಬ್ಬದ ನೆಪದಲ್ಲಿ ಎಲ್ಲ ಮಕ್ಕಳೂ ಸೇರುತ್ತಿದ್ದೆವು. ಮಕ್ಕಳ ಗಲಾಟೆ ಜಾಸ್ತಿಯೇ ಇತ್ತು. ಎಷ್ಟು ಹೇಳಿದರೂ ಕೇಳದ ನಮ್ಮನ್ನು ಒಮ್ಮೆ ಜೋರು ಮಾಡಿ, ನನ್ನ ಚಿಕ್ಕಪ್ಪ ಎಲ್ಲರ ಕೈಗೂ ಒಂದೊಂದು 'ಸುಧಾ' ಪತ್ರಿಕೆ ಕೊಟ್ಟರು. 'ಬರಿ ಆಟವಷ್ಟೇ ಆಡಿದರೆ ಸಾಲದು, ಸ್ವಲ್ಪ ಓದಲೂ ಕಲಿಯಿರಿ' ಅಂದರು. ಮೊದಲ ಬಾರಿ 'ಸುಧಾ' ನೋಡಿದ್ದೇ ಆಗ. ಮೊದಲೆಲ್ಲಾ ಅದನ್ನು ನೋಡಿದರೂ ಕೈಗೆತ್ತಿಕೊಂಡಿರಲಿಲ್ಲ. ಆದರೆ ಆಮೇಲೆ ಚಿಕ್ಕಪ್ಪನಿಗೆ ಹೆದರಿ ಪುಟ ತಿರುವಿದ್ದೆ.

ಓದುತ್ತಿದ್ದಂತೆ ಅದರಲ್ಲಿದ್ದ 'ಪುಟಾಣಿ ಪುಟ್ಟಿ', 'ಶಂತನು ಗಂಗೆಯು', 'ಫ್ಯಾಂಟಮ್' ಗಮನ ಸೆಳೆದವು. ಓದಿನ ರುಚಿ ಹೆಚ್ಚಿಸಿತು. ಆಗಿನಿಂದ ಶುರುವಾದ ನನ್ನ ಓದಿನ ಗೀಳು ಇಂದಿಗೂ ಮುಂದುವರಿದಿದೆ. ಆ ದಿನದ ನಂತರ ನನ್ನ ಇನ್ನೊಬ್ಬರು ಚಿಕ್ಕಪ್ಪ ತರುತ್ತಿದ್ದ 'ಸುಧಾ'ಗಾಗಿ ನಾವೆಲ್ಲಾ ಮಕ್ಕಳು ಕಾಯುತ್ತಿದ್ದೆವು. ತುಂಬಾ ಕಾತರದಿಂದ ಎಲ್ಲವನ್ನೂ ಓದುತ್ತಿದ್ದೆವು.

ಆನಂತರ, ಮುಂದೇನು ಎಂಬ ಕುತೂಹಲವನ್ನು ಕಾಯ್ದಿಟ್ಟುಕೊಳ್ಳುತ್ತಿದ್ದ ಅನೇಕ ಧಾರಾವಾಹಿಗಳು, ಕಥೆಗಳು, ಸಿನಿಮಾತಾರೆಯರ ಅಂಕಣಗಳು ವಾವ್! ಅದ್ಭುತ.

ಮುಂದೆ ಕಾಲೇಜು ದಿನಗಳಲ್ಲಿ ಸಮಯ ಸಿಕ್ಕಾಗಲೆಲ್ಲ ಲೈಬ್ರರಿಯಲ್ಲಿ 'ಸುಧಾ' ಓದುತ್ತಿದ್ದೆ. ಆಮೇಲೆ ಮನೆಗೆ ತರಿಸಲು ಆರಂಭಿಸಿದೆವು. ನನ್ನ ಓದಿನ ಹುಚ್ಚಿಗೆ ಕಾರಣವಾಗಿರುವ 'ಸುಧಾ'ಗೆ ನಾನೆಂದೂ ಆಭಾರಿ.

—ವಾಣಿಶ್ರೀ ಕೊಂಚಾಡಿ, ಮಂಗಳೂರು

## ಕನ್ನಡಿಗರ ಮನ ತಣಿಸಿದ 'ಸುಧಾ'

'ಸುಧಾ' ಜನ್ಮದಿಂದ ಬಂದ ಸಂಗಾತಿ. ಈ ಅರವತ್ತು ವರುಷಗಳು ಹೇಗೆ ಸರಿದು ಹೋದವೋ ಗೊತ್ತಾಗಲೇ ಇಲ್ಲ. ಒಂದು ಪೀಳಿಗೆಯನ್ನು ಅತ್ಯಂತ ಕಾಳಜಿಯಿಂದ ಪೋಷಿಸಿ, ಓದುವ ಅಭಿರುಚಿ ಬೆಳೆಸಿ, ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿ ಬೆಳೆಸಿದ ಶ್ರೇಯಸ್ಸು 'ಸುಧಾ'ಗೆ ಸಲ್ಲಬೇಕು.

'ಸುಧಾ' ಬೆಳೆದು ಬಂದ ರೀತಿ ತುಂಬಾ ಅಚ್ಚರಿದಾಯಕ ಹಾಗೂ ಜ್ಞಾನಪೂರಕ. ಮೊದಲಲ್ಲಿ ದಪ್ಪ ಕಾಗದದ ರಕ್ಷಾಪುಟದಲ್ಲಿ ಅತ್ಯಾಕರ್ಷಕ ಚಿತ್ರಗಳಿಂದ ಮನಸೆಳೆದ 'ಸುಧಾ', ಈಗಲೂ ಅದೇ ಆಕರ್ಷಣೆ ಉಳಿಸಿಕೊಂಡಿದೆ.

ವಿ.ಕೆ. ಭಾಸ್ಕರ್, ಚಂದ್ರನಾಥ್ ಇನ್ನೂ ಮುಂತಾದವರ ರಕ್ಷಾಕವಚ ಚಿತ್ರಗಳು ಇನ್ನೂ ಕಣ್ಣ ಮುಂದೆ ಬಂದಂತಿದೆ. ಕಥೆ, ಕಾದಂಬರಿಗಳಿಗೆ ಜಿ.ಕೆ. ಸತ್ಯ, ಹುಬ್ಳೀಕರ್, ಚಂದ್ರನಾಥ ಅವರ ಸೂಕ್ತ ಚಿತ್ರಗಳು, ನಾಡಿನ ಹೆಸರಾಂತ ಸಾಹಿತಿಗಳು ಬರೆದ ಕಾದಂಬರಿಗಳ ರಸದೂಟ, ಎಂ.ಎಸ್. ನರಸಿಂಹಮೂರ್ತಿ, ಎಂ.ಪಿ. ಮನೋಹರಚಂದ್ರ, ಸುನಂದಮ್ಮ, ಕೇಫ, ರಾಜ, ದಾಶರಥಿ ದೀಕ್ಷಿತ್ ಮುಂತಾದವರ ಹಾಸ್ಯ ಲೇಖನ, ಕಾದಂಬರಿಗಳು, ಜಿ.ಪಿ. ರಾಜರತ್ನಂ ಅವರ ಜಾತಕ ಕಥೆಗಳು ಹಾಗೂ ಇತರ ಮಕ್ಕಳ ಕಥೆಗಳು, ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆ, ಹಲವಾರು ವಿದ್ವಜ್ಜನರ ಲೇಖನಗಳು, ಚಿತ್ರ ವಿಮರ್ಶೆ (ಐದು ಬೆರಳು ನೋಡಿ ನರಳು!) ಮತ್ತು ಎಲ್ಲಾ ವಯಸ್ಸಿನವರಿಗೂ ತಕ್ಕ ಬರಹಗಳು.

ಒಂದೇ, ಎರಡೇ... ಅನುಪಮಾ ನಿರಂಜನ, ಎಂ.ಕೆ. ಇಂದಿರಾ, ಯಂಡಮೂರಿ, ಜಯತೀರ್ಥ ರಾಜುಪುರೋಹಿತ, ತರಾಸು ಇನ್ನೂ ಅನೇಕ ಸಾಹಿತಿಗಳ ಕಾದಂಬರಿಯ ಲೋಕಕ್ಕೆ ಪರಿಚಯಿಸಿ, ಅವರ ಪೂರ್ತಿ ಕೃತಿಗಳನ್ನು ಹುಡುಕಿ ಓದುವ ಅಭಿರುಚಿ ಬೆಳೆಸಿದ್ದೇ 'ಸುಧಾ'. ರಂಗಭೂಮಿಯ ಕಲಾವಿದರು, ಪ್ರಸಿದ್ಧ ಆಟಗಾರರು, ಲೇಖಕರು ಎಲ್ಲರನ್ನೂ ನಾಡಿನ ಮೂಲೆ ಮೂಲೆಗೆ ಪರಿಚಯಿಸಿದ್ದೇ 'ಸುಧಾ'.

ಹೇಳುತ್ತಾ ಹೋದರೆ ಮುಗಿಯದ ಸಂಗತಿಗಳು 'ಸುಧಾ'ದೊಂದಿಗಿನ ಅನುಬಂಧವನ್ನು ಬೆಸೆಯುತ್ತವೆ. ನೂರಾರು ನವ ಲೇಖಕರನ್ನು ಪರಿಚಯಿಸಿ ಬೆಳೆಸಿದ 'ಸುಧಾ', ತನ್ನ ನವರಸ ಔತಣದಿಂದ ಕನ್ನಡಿಗರ ಮನ ತಣಿಸುವ ಕಾಯಕ ಹೀಗೇ ಮುಂದುವರೆಸಲಿ.

ನಮ್ಮೆಲ್ಲರ ಪ್ರೀತಿಯ 'ಸುಧಾ' ಹೀಗೆ ಬೆಳೆದು ನೂರು, ಸಾವಿರ ವರುಷ ಪೂರೈಸಲಿ.

—ಎಂ. ಕುಮಾರಸ್ವಾಮಿ, ಬೆಂಗಳೂರು